ದಿನಾಂಕಃ 16.01.2023 ರ ಆದೇಶದ ಮೇರೆಗೆ ದಿನಾಂಕ 19.04.2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

6. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗಾಯದ ಪ್ರಮಾಣ ಪತ್ರವನ್ನು ಸಂಬಂಧಿಸಿದ ಪೊಲೀಸರಿಗೆ ನೀಡಿದ ಬಳಿಕ ನನಗೆ ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನ ಸಾದಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆಡಳಿತ ವೈಧ್ಯಾಧಿಕಾರಿಯಾಗಿ ವರ್ಗಾವಣೆಗೊಂಡಿದ್ದೆನು. ನಾನು ಅಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ನ.ರಾ.ಪುರ ವೃತ್ತ ನಿರೀಕ್ಷಕರು ದಿನಾಂಕ 15.12.2015 ರಂದು ಆರ್ ಎಫ್ ಎಸ್ ಸೀಲು ಇದ್ದ ಒಂದು ಆಯುಧಗಳನ್ನು ಮುಚ್ಚಿದ ರೀತಿಯಲ್ಲಿ ತಂದು ನನ್ನ ಮುಂದೆ ಹಾಜರುಪಡಿಸಿ ನಿಪಿ.8 ಗಾಯದ ಪ್ರಮಾಣ ಪತ್ರದಲ್ಲಿ ನಾನು ನಮೂದಿಸಿದ್ದ ಗಾಯಗಳು ಸದರಿ ಆಯುಧಗಳಿಂದ ಹೊಡೆದರೆ ಆಗುವ ಸಾಧ್ಯತೆ ಇದೆಯೇ ಎಂದು ಅಭಿಪ್ರಾಯ ನೀಡುವಂತೆ ಮನವಿಯನ್ನು ಸಲ್ಲಿಸಿದ್ದರು. ಅದರ ಮೇರೆಗೆ ನಾನು ಸದರಿ ಆಯುಧಗಳನ್ನು ತೆಗೆದು ಪರಿಶೀಲಿಸಿ ನಾನು ನಿಪಿ.8 ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಗಾಯಗಳು ಸದರಿ ಆಯುಧಗಳಿಂದ ಹೊಡೆದರೆ ಆಗುವ ಸಾಧ್ಯತೆ ಇದೆ ಎಂದು ತಿಳಿಸಿ ಅದೇ ದಿನ ಮೇಲೆ ಹೇಳಿದ ವೃತ್ತ ನಿರೀಕ್ಷಕರಿಗೆ ಅಭಿಪ್ರಾಯ ವರದಿಯನ್ನು ನೀಡಿರುತ್ತೇನೆ. ಅದನ್ನು ಅವರು ದಿನಾಂಕ 18.12.2015 ರಂದು ನನ್ನಿಂದ ಪಡೆದುಕೊಂಡಿರುತ್ತಾರೆ. ಸದರಿ ಅಭಿಪ್ರಾಯ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.13 ಎಂದು ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ

ಸಹಿಯನ್ನು ನಿಪಿ.13(ಬಿ) ಎಂದು ಗುರುತಿಸಲಾಯಿತು.

7. ಸದರಿ ಆಯುಧಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.5 ರಿಂದ ಮು.ಮಾ.10 ಎಂದು ಗುರುತಿಸಲ್ಪಟ್ಟಿರುವ ಆಯುಧಗಳನ್ನು ನೋಡಿ ಗುರುತಿಸಿ ನಾನು ಪರಿಶೀಲಿಸಿ ನಿಪಿ.13 ರಂತೆ ವರದಿ ನೀಡಿದ ಆಯುಧಗಳು ಅವೇ ಎಂದು ನುಡಿದಿರುತ್ತಾರೆ.

ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್ ಇ ಎ ಕೆ ವಕೀಲರಿಂದಃ **1** ರಿಂದ **3, 5** ರಿಂದ **7** ನೇ ಆರೋಪಿತರ ಪರವಾಗಿಃ

8. ಪೊಲೀಸರು ನನಗೆ ಅಂತಿಮ ಅಭಿಪ್ರಾಯ ವರದಿಯನ್ನು ನೀಡುವಂತೆ ಲಿಖಿತವಾಗಿ ಮನವಿಯನ್ನು ಸಲ್ಲಿಸಿದ್ದರು. ನಿಪಿ.13 ರಲ್ಲಿ ನೀವು ಪರಿಶೀಲಿಸಿದ್ದೀರಿ ಎಂದು ಹೇಳಲಾದ ಆಯುಧಗಳು ಎಷ್ಟು ಮತ್ತು ಅವುಗಳ ವಿವರ ಮತ್ತು ವಸ್ತುಸ್ಥಿತಿ ಏನು ಎಂದು ಅದರಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಾನು ಪರಿಶೀಲಿಸಿದ ವಸ್ತುಗಳ ಮೇಲೆ ನನ್ನ ಸಹಿ ಇರುವ ಚೀಟಿಗಳನ್ನು ಅಂಟಿಸಿಲ್ಲ. ನೀವು ಸೀಲಾದ ಕವರನ್ನು ಬಿಚ್ಚಿ ನೋಡದ ಕಾರಣ ಅದರಲ್ಲಿ ಯಾವ ಯಾವ ಆಯುಧಗಳು ಇದ್ದವು ಎಂದು ನಿಮಗೆ ಹೇಳಲಾಗುವುದಿಲ್ಲ ಎಂದರೆ ಸಾಕ್ಷಿ ನಾನು ಅವುಗಳನ್ನು ಬಿಚ್ಚಿ ಪರಿಶೀಲಿಸಿದ್ದೇನೆ ಎನ್ನುತ್ತಾರೆ.

9. ನೀವು ನಿಪಿ.13 ರಲ್ಲಿ Sealed weapons ಎಂದು ನಮೂದು ಮಾಡಿರುವ ಕಾರಣ ನೀವು ಅವುಗಳನ್ನು ಬಿಚ್ಚಿ ನೋಡದೇ ಇಂತಿಂತ ಆಯುಧಗಳಿಂದ ಇಂತಿಂತ ಗಾಯಗಳು

ಆಗುತ್ತವೆ ಎಂದು ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ನಾನು ಸೀಲಾಗಿದ್ದ ಆಯುಧಗಳನ್ನು ತೆರೆದು, ಪರಿಶೀಲಿಸಿ ವರದಿ ನೀಡಿದ್ದೇನೆ ಎನ್ನುತ್ತಾರೆ. ನಾನು ಪರಿಶೀಲಿಸಿದ ಆಯುಧಗಳ ಉದ್ದಳತೆಗಳನ್ನು ನಿಪಿ.13 ರಲ್ಲಿ ಬರೆದಿಲ್ಲ ಆದರೆ ಅವುಗಳನ್ನು ನೋಡಿ ಅಂದಾಜಿಸಿ ಹೇಳಬಲ್ಲೆನು.

10. ಗಾಯಾಳು ತನಗೆ ಚಾಕುವಿನಿಂದ ಹೊಡೆದಿದ್ದಾಗಿ ನಿಮ್ಮ ಹಿಂದಿನ ಪಾಟೀ ಸವಾಲಿನಲ್ಲಿ ಹೇಳಿದ್ದೀರಿ ತನಿಖಾಧಿಕಾರಿಗಳು ಯಾವುದೇ ಚಾಕುವನ್ನು ನಿಮ್ಮ ಪರಿಶೀಲನೆ ಕಳುಹಿಸಿಕೊಟ್ಟಿದ್ದರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮು.ಮಾ.5 ರಿಂದ 10 ನ್ನು ಪೊಲೀಸರು ನಿಮ್ಮ ಮುಂದೆ ಹಾಜರುಪಡಿಸಿದ್ದಾಗಿ ಅವುಗಳನ್ನು ನೀವು ಪರಿಶೀಲಿಸಿ ನಿಪಿ.13 ರಂತೆ ವರದಿ ನೀಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಪರಿಶೀಲಿಸಿದ ಆಯುಧಗಳೇ ಮು.ಮಾ.5 ರಿಂದ ಮು.ಮಾ.10 ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 4 ನೇ ಆರೋಪಿ ಪರವಾಗಿ ಶ್ರೀ ಎ ಆರ್ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.</u>

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ